







# ಈರುಳ್ಳಿ ಷೋ!

ಈರುಳ್ಳಿ ಅಡುಗೆಗೆ ಮಾತ್ರ ಬಳಕೆಯಾಗುತ್ತದೆ ಎಂದು ನೀವು ಭಾವಿಸಿದ್ದರೆ, ಅದು ತಪ್ಪು. ಅವುಗಳನ್ನು ಎಷ್ಟೊಂದು ಚೆಂದವಾಗಿ ಪ್ರದರ್ಶಿಸಬಹುದು ಎಂಬುದಕ್ಕೆ ಇಲ್ಲಿದೆ ನೋಡಿ ಸಾಕ್ಷಿ. ಟರ್ಕಿಯಲ್ಲಿ ಪ್ರತಿ ವರ್ಷ ನಡೆಯುವ ಈರುಳ್ಳಿ ಪ್ರದರ್ಶನದಲ್ಲಿ ಈ ವೈವಿಧ್ಯಮಯ ನೋಟ ಕಾಣಸಿಗುತ್ತದೆ. ವಿವಿಧ ಅಳತೆಯ ಈರುಳ್ಳಿಗಳನ್ನು ಅಲಂಕರಿಸಿ ನೋಡುಗರ ಕಣ್ಮನ ಸೆಳೆಯುವಂತೆ ಪ್ರದರ್ಶನ ಮಾಡಲಾಗುತ್ತದೆ. ಕೋಟು, ಹ್ಯಾಟು ಧರಿಸಿದ ಮಹನೀಯರು ಒಂದೆಡೆ ಇದ್ದರೆ, ಇನ್ನೊಂದೆಡೆ ದೊಡ್ಡ ಟೊಪ್ಪಿ ಧರಿಸಿದ ಉದ್ಯಮಿದಾರ! ಸಣ್ಣ ಈರುಳ್ಳಿಗಳನ್ನು ಬಸವನಹುಳುಗಳ ರೂಪದಲ್ಲಿ ವಿನ್ಯಾಸ ಮಾಡಿ ಇಡಲಾಗುತ್ತದೆ. ಈರುಳ್ಳಿಯನ್ನು ಕಲಾತ್ಮಕವಾಗಿ ಹೇಗೆಲ್ಲಾ ಪ್ರದರ್ಶಿಸಬಹುದು ಎನ್ನುವುದಕ್ಕೆ ಈ ಷೋ ಸಾಕ್ಷಿ. ಅಂದ ಹಾಗೆ, ಪ್ರದರ್ಶನಕ್ಕೆ ಇಡಲಾದ ಈರುಳ್ಳಿ ಬೊಂಬೆಗಳ ಪೈಕಿ ಅತ್ಯುತ್ತಮ ವಿನ್ಯಾಸಕ್ಕೆ ನಗದು ಬಹುಮಾನ ಕೂಡಾ ಉಂಟು. ಈರುಳ್ಳಿಯ ಮಾರುಕಟ್ಟೆಯನ್ನು ಬಲಪಡಿಸಲೂ ಈ ಪ್ರದರ್ಶನ ಅಲ್ಲಿ ನೆರವಾಗುತ್ತದಂತೆ. ನಮ್ಮಲ್ಲಿ ಒಮ್ಮೊಮ್ಮೆ ಈರುಳ್ಳಿಯ ಬೆಲೆ ಗಗನಕ್ಕೇರಿ ಗ್ರಾಹಕರಲ್ಲಿ ಕಣ್ಣೀರು ಬರಿಸುವುದುಂಟು. ಕೆಲವೊಮ್ಮೆ ಬೆಲೆ ಪಾತಾಳಕ್ಕೆ ಕುಸಿದು ರೈತರು ಕಣ್ಣೀರು ಹಾಕುವುದುಂಟು. ಇಲ್ಲೂ ಬೆಲೆ ಸ್ಥಿರತೆಗೆ ಕಲಾತ್ಮಕ ಪ್ರದರ್ಶನ ಏರ್ಪಡಿಸಿದರೆ ಹೇಗೆ?

■ ಪಿ.ಎ. ಛಾಯಾ

